ರಾಜ್ಯದಲ್ಲಿ ಪರಿಸರದ ಉಳಿವಿಗಾಗಿ ಹಾಕಿಕೊಂಡಿರುವ ಯೋಜನೆಗಳು

528 - ಶ್ರೀ ಸಂಗಣ್ಣ ಕರಡಿ (ಕೊಪ್ಪಳ) : ಮಾನ್ಯ ಸಕ್ಕರೆ, ಜವಳಿ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಪರಿಸರ ಮತ್ತು ಜೀವಿಶಾಸ್ತ್ರ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಪರಿಸರ ಉಳಿವಿಗಾಗಿ ಮತ್ತು ಅಭಿವೃದ್ಧಿಗಾಗಿ ಸರ್ಕಾರ ಗಮನಹರಿಸಿದೆಯೇ

ಆ) ಹಾಗಿದ್ದಲ್ಲಿ, ಕೈಗೊಂಡ ಕ್ರಮಗಳು ಯಾವುವು?

ಶ್ರೀ ಪಿ.ಸಿ. ಸಿದ್ದನಗೌಡರ್ (ಸಕ್ಕರೆ, ಜವಳಿ, ವಿಜ್ಞಾನ ಮತ್ತು ತಂತ್ರಜ್ಞಾನ ಪರಿಸರ ಮತ್ತು ಜೀವಿಶಾಸ್ತ್ರ ರಾಜ್ಯ ಸಚಿವರು) :

ಅ) ಹೌದು

ಆ) ಪರಿಸರಕ್ಕೆ ಸಂಬಂಧಿಸಿದಂತೆ 10 ಯೋಜನೆಗಳನ್ನು ಕೈಗೊಂಡಿದೆ. ಅವುಗಳೆಂದರೆ :

1) ಪರಿಸರ ಶಿಕ್ಷಣ ಮತ್ತು ತರಬೇತಿ
2) ಪರಿಸರ ಅಧ್ಯಯನ
3) ಪರಿಸರ ಯೋಜನೆಗಳು ಮತ್ತು ಇತರ ಸಂಬಂಧಪಟ್ಟ ಯೋಜನೆಗಳು
4) ಕೇಂದ್ರ ಸಹಾಯತ ಪರ್ಯಾವರಣ ವಾಹಿನಿ ಯೋಜನೆ
5) ಸಸ್ಯ ಶಾಸ್ತ್ರದ ಸಮೀಕ್ಷೆ
6) ಕುಂದಾಪುರದಲ್ಲಿ ಸಂರಕ್ಷಣಾ ಕಾರ್ಯಕ್ರಮಗಳು
7) ಸಾಮಾನ್ಯ ಶುದ್ಧೀಕರಣ ಸ್ಥಾವರ
8) ಪ್ರಾಣಿ ಶಾಸ್ತ್ರದ ಸಮೀಕ್ಷೆ
9) ಪಸರಿಸಿರುವ ಕಲುಷಿತ ನದಿಗಳ ಮೇಲಿನ ಪರಿಶೋಧನೆ ಮತ್ತು ಸಮೀಕ್ಷೆಗಾಗಿ ರಾಷ್ಟ್ರೀಯ ನದಿ ಕಾರ್ಯಯೋಜನೆಯ ಕೇಂದ್ರ ಪುರಸ್ಕೃತ ಯೋಜನೆ.

ಇದಲ್ಲದೆ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಜಲ, ವಾಯು ಕಾಯ್ದೆಗಳಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಪರಿಸರ ಮಾಲಿನ್ಯ ನಿಯಂತ್ರಣ ಕ್ರಮಗಳನ್ನು ಕೈಗೊಳ್ಳುತ್ತದೆ.

ರಾಜ್ಯದಲ್ಲಿರುವ ವಸತಿ ರಹಿತರು ಹಾಗೂ ನಿವೇಶನ ರಹಿತರನ್ನು ಗುರುತಿಸುವ ಕಾರ್ಯಕ್ರಮ

529- ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ (ಚಾಮರಾಜ) : ಮಾನ್ಯ ವಸತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಸರ್ಕಾರ ಈ ಹಿಂದೆ ಕೈಗೊಂಡಿದ್ದ ವಸತಿ ರಹಿತರ ಹಾಗೂ ನಿವೇಶನ ರಹಿತರನ್ನು ಗುರುತಿಸುವ ಕಾರ್ಯ ಮುಗಿದಿದೆಯೇ?

ಆ) ರಾಜ್ಯಾದ್ಯಂತ ಇವರುಗಳ ಸಂಖ್ಯೆಯನ್ನು ಜಿಲ್ಲಾವಾರು ತಿಳಿಸಲಾಗುವುದೇ?

ಇ) ಮೈಸೂರು ನಗರದಲ್ಲಿ ಇವರುಗಳ ಸಂಖ್ಯೆ ಎಷ್ಟು

ಈ) ಇವರುಗಳಿಗೆ ಮನೆ ಅಥವಾ ನಿವೇಶನ ನೀಡುವುದು ಯಾವಾಗ ಈ ಬಗ್ಗೆ ಯೋಜನೆಯ ವಿವರಗಳನ್ನು ತಿಳಿಸಲಾಗುವುದೇ ಇದಕ್ಕಾಗಿ ಎಷ್ಟು ಹಣ ವೆಚ್ಚವಾಗುವುದು?

ಶ್ರೀ ಬಸವರಾಜ ರಾಯರೆಡ್ಡಿ (ವಸತಿ ರಾಜ್ಯ ಸಚಿವರು) :

ಅ) ಹೌದು. ಸರ್ವೇಕ್ಷಣೆ ಕಾರ್ಯ ಮೇ-1995ರಲ್ಲಿ ಮುಗಿದಿದೆ.

ಆ) ವಸತಿ ನಿವೇಶನ ಹಾಗೂ ಮನೆ ರಹಿತರ ಒಟ್ಟು ಸಂಖ್ಯೆ 19.34 ಲಕ್ಷವೆಂದು ರಾಜ್ಯ ಸರ್ಕಾರ ಸರ್ವೇಕ್ಷಣೆ ನಡೆಸಿದೆ. ಜಿಲ್ಲಾವಾರು ವಿವರಗಳನ್ನು ಅನುಬಂಧ - 1 ರಲ್ಲಿ ಲಗತ್ತಿಸಲಾಗಿದೆ.

ಇ) ಮೈಸೂರು ನಗರದಲ್ಲಿನ ಮನೆ ರಹಿತ ಹಾಗೂ ನಿವೇಶನ ರಹಿತರ ವಿವರಗಳು ಕೆಳಕಂಡಂತಿವೆ:

ಮನೆ ರಹಿತರ ಸಂಖ್ಯೆ	:	53,950
ನಿವೇಶನರಹಿತರ ಸಂಖ್ಯೆ	:	1,30,633

ಈ) ಅರ್ಹ ಫಲಾನುಭವಿಗಳಿಗೆ ಹಂತ ಹಂತವಾಗಿ ಪ್ರತಿ ವರ್ಷ ಸರ್ಕಾರದ ನಿಗದಿ ಪಡಿಸಿದ ಗುರಿಯಂತೆ ನೀಡಲಾಗುವುದು. ರೂ. 11,800-00 ವರಮಾನ ಕಡಿಮೆ ಇರುವ ವ್ಯಕ್ತಿ ಹಾಗೂ ಮನೆ ನಿವೇಶನ ಹೊಂದದೆ ಇರುವ ವ್ಯಕ್ತಿ ಅರ್ಹ ಫಲಾನುಭವಿ ಆಗಿರುತ್ತಾನೆ. ಇವರುಗಳಿಗೆ ಮನೆಗಳನ್ನು ಆಶ್ರಯ, ಡಾ।। ಅಂಬೇಡ್ಕರ, ಇಂದಿರಾ ಆವಾಸ್ ಗ್ರಾಮಾಂತರ ಪ್ರದೇಶದಲ್ಲಿ ರೂ. 20,000-00 ಒಂದು ಮನೆಗೆ, ಆಶ್ರಯ ಯೋಜನೆಯಲ್ಲಿ ನಗರ ಪ್ರದೇಶದಲ್ಲಿ ರೂ. 24,500 (19,500 ಹುಡ್ಕೋ ಸಾಲದಿಂದ ಹಾಗೂ 5,000 ಫಲಾನುಭವಿಗಳ ಹಣ ಅಥವಾ ಶ್ರಮದಿಂದ) ಗ್ರಾಮಾಂತರ ಪ್ರದೇಶದಲ್ಲಿ ಹಾಗೂ ನಗರ ಪ್ರದೇಶದಲ್ಲಿ ಉಚಿತ ನಿವೇಶನ ನೀಡಲಾಗುವುದು ಸಮಗ್ರ ಯೋಜನೆ ತಯಾರು ಮಾಡಲಾಗುವುದು.

ಅನುಬಂಧ - I

ಕ್ರಮ ಸಂಖ್ಯೆ	ಜಿಲ್ಲೆಗಳ ಹೆಸರು	ನಿವೇಶನ ರಹಿತರು	ವಸತಿ ಹೀನರು
1)	ಬೆಂಗಳೂರು ನಗರ	56,894	50,556
2)	ಮಂಡ್ಯ	62,824	40,281
3)	ಚಿತ್ರದುರ್ಗ	83,025	41.382
4)	ದಕ್ಷಿಣ ಕನ್ನಡ	41,895	36,665
5)	ಬೆಂಗಳೂರು ಗ್ರಾಮಾಂತರ	64,267	43,300
6)	ಶಿವಮೊಗ್ಗ	68,299	26,157
7)	ರಾಯಚೂರು	27,066	64,776
8)	ತುಮಕೂರು	70,830	48,211
10)	ಬಿಜಾಪುರ	96,463	23,658
11)	ಕೊಡಗು	18,965	18,965
12)	ಹಾಸನ	45,713	30,906
13)	ಗುಲ್ಬರ್ಗಾ	69,371	35,036
14)	ಬೀದರ್	33,040	17,950
15)	ಬೆಳಗಾವಿ	73,535	35,607
16)	ಚಿಕ್ಕಮಗಳೂರು	17,721	41,369
17)	ಮೈಸೂರು	75,000	55,273
18)	ಉತ್ತರ ಕನ್ನಡ	23,326	23,147
19)	ಬಳ್ಳಾರಿ	80,993	38,096
20)	ಧಾರವಾಡ	1,00,127	41,742
	ಒಟ್ಟು	**11,52,188**	**7,81,812**

9521-96